**ದಿನಾಂಕಃ 09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿಯರು ಮೊದಲು ಅವರ ಊರಿನಲ್ಲಿದ್ದು, ಈಗ ದೊಡ್ಡಬಳ್ಳಾಪುರದಲ್ಲಿರುತ್ತಾರೆ. ಅವರು ಊರನ್ನು ಬಿಟ್ಟು ಸುಮಾರು 7-8 ವರ್ಷಗಳಾಗಿರುತ್ತವೆ. ಕರಾರಾದ ಸಮಯಕ್ಕೆ ಅವರು ಅವರ ಊರಿನಲ್ಲಿಯೇ ವಾಸಿಸುತ್ತಿದ್ದರು. ಅದರನಂತರ 2-3 ವರ್ಷದ ನಂತರ ಊರು ಬಿಟ್ಟಿರಬಹುದು. 2014 ರಲ್ಲಿ ಕರಾರು ಆಗಿರುತ್ತದೆ.

ನನಗೆ ಮಾಡಿಸಲಾಗಿದೇ ಎಂದು ಹೇಳಲಾದ ಕರಾರಿನಲ್ಲಿ ಹೆಬ್ಬೆಟ್ಟನ್ನು ಹಾಕಿರುತ್ತಾರೆ. 2 ನೇ ಪ್ರತಿವಾದಿಯು ಸಹಿ ಹಾಕಿರುತ್ತಾರೆ. ಅವರು ವಿದ್ಯಾಬ್ಯಾಸ ಮಾಡಿರುತ್ತಾರೆ ಇಲ್ಲವೊ ಗೊತ್ತಿರುವುದಿಲ್ಲ. ಪ್ರತಿವಾದಿಗಳಿಗೆ ದಾವಾ ಸ್ವತ್ತನ್ನು ಹೊರತು ಪಡಿಸಿ ಬೇರೆ 6 ಎಕರೆ ಜಮೀನು ಇರುತ್ತದೆ. 1 ನೇ ಪ್ರತಿವಾದಿಗೆ ಇಬ್ಬರು ಮಕ್ಕಳಿರುತ್ತಾರೆ ಅವರು 3 ಮತ್ತು 4 ನೇ ಪ್ರತಿವಾದಿಗಳಾಗಿರುತ್ತಾರೆ. 1 ನೇ ಪ್ರತಿವಾದಿಯು ಅವರ ಮಗಳ ಮದುವೆಗೆಂದು ಮಾರಾಟ ಮಾಡಲು ಮುಂದಾಗಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಕಾರಣವನ್ನು ಕರಾರು ಪತ್ರದಲಿಲ ನಮೂದಿಸಿರುವುದಿಲ್ಲ. 4 ನೇ ಪ್ರತಿವಾದಿಯ ಸಹಿ ಕರಾರು ಪತ್ರದಲ್ಲಿರುವುದಿಲ್ಲ. ಮದುವೆ ಆಗಿ ಹೋಗುವ ಹೆಣ್ಣು ಮಗಳಾಗಿರುತ್ತಾಳೆಂಬ ಕಾರಣಕ್ಕೆ ಸದರಿಯವರ ಸಹಿ ಕರಾರು ಪತ್ರದಲ್ಲಿರುವುದಿಲ್ಲ.

ಕರಾರಿನ ವ್ಯವಹಾರವು ದೊಡ್ಡಬಳ್ಳಾಪುರದಲ್ಲಿರುವ APMC market ನಲ್ಲಿ ಇರುವ ನಮ್ಮ ಅಣ್ಣನ ಮನೆಯಲ್ಲಿ ಜರುಗಿರುತ್ತದೆ. ಕರಾರಾಗು ಒಂದು ತಿಂಗಳು ವೊದಲು ಸದರಿ ಸ್ಥಳದಲ್ಲಿ ಮಾತುಕತೆಯಾಗಿರುತ್ತದೆ. ಮಾತುಕತೆ ವೇಳೆಯಲ್ಲಿ ನನ್ನ ಅಣ್ಣ, ಕೆ.ಸಿ ನಾಗರಾಜು, 1 ರಿಂದ 3 ನೇ ಪ್ರತಿವಾದಿಯರು ಇದ್ದರು. ಸುಮಾರು 12 ಗಂಟೆಗೆ ಶುರುವಾಗಿ 1 ಗಂಟೆ ಅಷ್ಟರಲ್ಲಿ ಮುಕ್ತಾಯವಾಗಿರುತ್ತದೆ. ಮಾತುಕತೆ ಸಮಯಕ್ಕೆ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆಯು 1 ಎಕರೆಗೆ ಸುಮಾರು 6 ಲಕ್ಷ ರೂ. ಇರುತ್ತದೆ. ಪ್ರತಿವಾದಿಯ ಜಮೀನನ್ನು ಮಾರಾಟ ಮಾಡಲು ಮುಂದೆ ಇಟ್ಟಿರುತ್ತಾರೆ. ಅವರು 3,50,000/- ಬೇಡಿಕೆ ಇಟ್ಟಿದ್ದು ನಾವು 3 ಲಕ್ಷ ರೂ. ಕೊಡುತ್ತೇವೆಂದು ತಿಳಿಸಿರುತ್ತೇವೆ. ಸದರಿ ಸಮಯದಲ್ಲಿ ಅದೇ ವರ್ಷದ ಜಮೀನಿಗೆ ಸೇರಿದ ಪಹಣಿಯನ್ನು ಮಾತ್ರ ಪ್ರತಿವಾದಿಯರು ನೀಡಿದ್ದರು. ಸದರಿ ಪಹಣಿಯಲ್ಲಿ ಸ್ವತ್ತು ಜಂಟಿಯಾಗಿದ್ದು ಪಹಣಿಗಳಲ್ಲಿ 1 ನೇ ಪ್ರತಿವಾದಿಯರ ಹೆಸರಿನ ಜೊತೆ ಅವರ ದೊಡ್ಡಪ್ಪ ಹಾಗೂ ಚಿಕ್ಕಪ್ಪನವರ ಮಕ್ಕಳ ಹೆಸರು ಸಹ ದಾಖಲಾಗಿತ್ತು.

ದಾವಾ ಸ್ವತ್ತು ಊರಿನಿಂದ ಸುಮಾರು ½ ಕಿ.ಮೀ ಅಂತರದಲ್ಲಿರುತ್ತದೆ. ಮಾತುಕತೆ ವೇಳೆಯಲ್ಲಿ 5,000/- ರೂ. ಮುಂಗಡ ಹಣವಾಗಿ ನೀಡಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಬರವಣಿಗೆ ಆಗಿರುವುದಿಲ್ಲ. ನಿಪಿ 17 ಅನ್ನು ಪತ್ರ ಬರಹಗಾರರಾದ ಮಾರ್ತಿ ರವರ ಬಳಿ ಮಾಡಿಸಿರುತ್ತೇವೆ. ಸದರಿ ದಾಖಲೆಯ ಮಾಹಿತಿಯನ್ನು ಅವರೇ ತಯಾರಿಸಿರುತ್ತಾರೆ. ತಯಾರಿಸುವ ಮೊದಲು ಪ್ರತಿವಾದಿಯರು ಅವರಿಗೆ ಅವರ ವಂಶವೃಕ್ಷ, ದಾವಾ ಸ್ವತ್ತಿನ ಮೂಲದಾಖಲೆಗಳು, ಪಹಣಿ ಹಾಗೂ ಇಸಿ ಯನ್ನು ಮೂರ್ತಿ ಅವರಿಗೆ ಕೊಟ್ಟಿರುತ್ತಾರೆ. ಆ ಸಮಯದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಪ್ರತಿವಾದಿಯರು ನನಗೂ ಸಹ ಕೊಟ್ಟಿದ್ದರು. ಆ ದಿನ ಪ್ರತಿವಾದಿಯರು ನೀಡಿದಂತಹ ದಾಖಲೆಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ 17 ರಲ್ಲಿ ಅಣ್ಣನ ಸಹಿ ಹಾಗೂ ಅವರ ಮೊಹರು ಇರುತ್ತದೆ. ಸಕ್ಷಿಗೆ ನಿಪಿ 17 ರಲ್ಲಿ ಗೋಪಾಲಕೃಷ್ಣ.ಎಮ್ ಎಂಬ ಪತ್ರಗಾರರಾಗಿರುತ್ತಾರೆಂದು ಇರುತ್ತದೆ ಅವರು ಮೂರ್ತಿ ಯವರ ಅಣ್ಣನೇ ಎಂದು ಪ್ರಶ್ನಿಸಿದರೆ. ಮೂರ್ತಿ ಯವರ ಅಣ್ಣನ ಹೆಸರು ಸರಿಯಾಗಿ ನೆನಪಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಗೋಪಾಲಕೃಷ್ಣ ರವರ ಕಚೇರಿಯಲ್ಲಿ ನಿಪಿ 17 ಅನ್ನು ತಯಾರಿಸಲಾಗಿರುತ್ತದೆ ಆದರೆ, ಅದನ್ನು ತಯಾರಿಸಿದವರು ಮಾರ್ತಿ ಆಗಿರುತ್ತಾನೆ. ಸೀಲು ಸಹಿಯನ್ನು ಗೋಪಾಲಕೃಷ್ಣ ರವರೆ ಹಾಕಿರುತ್ತಾರೆ.

ನಿಪಿ 17 ಅನ್ನು ಸುಮರು 12 ಗಂಟೆಗೆ ತಯಾರಿಸಲಾಗಿರುತ್ತದೆ ಹಾಗೂ ಉಪ ನೊಂದಣಾಧಿಕಾರಿ ಕಚೇರಿಗೆ ಸುಮಾರು 1.30 ಗಂಟೆಗೆ ಹೋಗಿರುತ್ತದೆ. ಬೆಳಗ್ಗೆ ಸುಮಾರು 10 ಗಂಟೆಗೆ ಹೋಗಿ ನಿಪಿ 17 ಅನ್ನು ತಯಾರಿಸಲು ತಿಳಿಸಿರುತ್ತೇನೆ. ನೊಂದಣಾಧಿಕಾರಿ ಕಚೇರಿಗೆ ಸಾಕ್ಷಿಗಳಾದ ನಾರಾಯಾಣಸ್ವಾಮಿ ಮತ್ತು ವೆಂಕಟೇಶ ಹಾಗೂ 1 ಮತ್ತು 2 ಪ್ರತಿವಾದಿಯರು ನನ್ನ ಜೊತೆ ಬಂದಿರುತ್ತಾರೆ. ಪತ್ರವನ್ನು ತಯಾರಿಸುವ ಸಮಯದಲ್ಲಿ 1 ರಿಂದ 3 ನೇ ಪ್ರತಿವಾದಿಯರು ಬರಹಗಾರರ ಕಚೇರಿಯಲ್ಲಿದ್ದರು. ಮಾರ್ತಿಯವರು ಪತ್ರ ತಯಾರಿಸುವ 6 ತಿಂಗಳು ಮೊದಲು ಪರಿಚಯವಾಗಿರುತ್ತಾರೆ. ಅವರು ನಿಪಿ 17 ಕ್ಕೆ ಸಹಿ ಹಾಕಿರುವುದಿಲ್ಲ.

1 ಮತ್ತು 2 ನೇ ಪ್ರತಿವಾದಿಗೆ ಒದು ಬರಹ ಬರುವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಯ ನಿಪಿ 17 ರಲ್ಲಿರುವ ವಿಷಯಗಳನ್ನು 1 ಹಾಗೂ 2 ನೇ ಪ್ರತಿವಾದಿಗೆ ಒದಿ ತಿಳಿಸಿರುತ್ತಾರೆ. ನಿಪಿ 17 ಅನ್ನು ತಯಾರಿಸುವ ಮೊದಲು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ಮಾರುಕಟ್ಟೆ ಬೆಲೆ ಎಷ್ಟಿತ್ತೆಂದು ನೋಡಲು ದಾಖಲೆ ಪಡೆದಿರಲಿಲ್ಲ.

2,60,000/- ಮುಂಗಡ ಹಣವನ್ನು ನಗದು ಮೂಲಕ ನೀಡಿರುತ್ತೇನೆ. ಸದರಿ ಮೊತ್ತ ನಾನು ಕೂಡಿಟ್ಟ ಹಣ ಹಾಗೂ ಸಾಲ ಮಾಡಿ ತಂದಂತಹ ಹಣವಾಗಿರುತ್ತದೆ. ಅದನ್ನು ರುಜುವಾತು ಪಡಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನಿಪಿ 17 ಅನ್ನು ಮಾಡಿಸಿದ ನಂತರ 6 ತಿಂಗಳ ಅವಧಿಯಲ್ಲಿ ಕ್ರಯ ಪತ್ರ ಮಾಡಿಸಲು ಕಾಲಾವಕಾಶ ನಿಗದಿ ಮಾಡಲಾಗಿರುತ್ತದೆ. ನಿಪಿ 17 ರಲ್ಲಿ 5 ತಿಂಗಳು ಎಂದು ನಿಗದಿಯಾಗಿರುತ್ತದೆಂದರೆ ಸರಿ. 5 ತಿಂಗಳೊಳಗೆ ಪ್ರತಿವಾದಿಯರಿಗೆ ಕ್ರಯ ಪತ್ರ ಮಾಡಿಕೊಡಿ ಯಾವುದೇ ನೋಟೀಸ್ ಅಥವಾ ನಾವು ಯಾವುದೇ ರೀತಿಯ ಬೇಡಿಕೆಯನ್ನು ಇಟ್ಟಿರಲಿಲ್ಲ. ಅವಧಿ ಮುಗಿದ 1 ವರ್ಷದ ನಂತರದಲ್ಲಿ ಪಂಚಾಯತಿಯನ್ನು ಸೇರಿಸಿ ಕ್ರಯ ಪತ್ರ ಮಾಡಿಕೊಡಲು ಕೇಳಿಕೊಂಡಿರುತ್ತೇವೆ. ಪ್ರತಿವಾದಿಯು ಪಹಣಿಗಳು ಜಂಟಿಯಲ್ಲಿರುವ ಕಾರಣಕ್ಕೆ ಹಾಗೂ ಮದುವೆಯನ್ನು ಈಗ ತಾನೇ ಮಾಡಿ ಮುಗಿಸಿದ ಕಾರಣಕ್ಕೆ ಪಹಣಿಯನ್ನು ವಿಂಗಡಿಸಿಕೊಂಡು ಕ್ರಯ ಪತ್ರಮಾಡಿಕೊಡಲು ಕಾಲಾವಕಾಶ ಕೇಳಿರುತ್ತಾರೆ. ಸದರಿ ವೇಳೆಯಲ್ಲಿ ರಾಮಾಂಜಿನಪ್ಪ, ನಾರಾಯಣ ಸ್ವಾಮಿ, ದೊಡ್ಡಪ್ಪಯ್ಯ, ಮಂಜುನಾಥ ಹಾಗೂ ಚಿಕ್ಕಪ್ಪಯ್ಯ ಅವರು ಹಾಜರಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಷರಾವನ್ನು ನಿಪಿ17 ರಲ್ಲಿ ಬರೆಯಲಾಗಿರುವುದಿಲ್ಲ.

ಅದಾದ 6 ತಿಂಗಳ ನಂತರದಲ್ಲಿ ಮತ್ತೊಂದು ಬಾರಿ ಪಂಚಾಯತಿ ಸೇರಿಸಲಾಗಿರುತ್ತದೆ. ಸದರಿ ವೇಳೆಯಲ್ಲಿ ರಾಮಾಂಜಿನಪ್ಪ, ನಾರಾಯಣ ಸ್ವಾಮಿ, ಚಿಕ್ಕಪ್ಪಯ್ಯ, ನರಸಿಂಹರಾಜು, ನಾಗರಾಜು ಹಾಜರಿದ್ದರು. ಸದರಿ ಸಮಯದಲ್ಲಿಯೂ ಸಹ ಯಾವುದೇ ಷರಾವನ್ನು ಸಹ ನಿಪಿ17 ರಲ್ಲಿ ಬರೆಯಲಾಗಿರುವುದಿಲ್ಲ. 2017 ರಲ್ಲಿ ಸದರಿಯವರ ಸಮಕ್ಷಮವೇ ಪಹಣಿ ವಿಂಗಡನೆ ಯಾದ ಕಾರಣಕ್ಕೆ ಕ್ರಯಪತ್ರವನ್ನು ಮಾಡಿಕೊಡಿ ಎಂದು ಪ್ರತಿವಾದಿಯರಿಗೆ

ಕೇಳಿಕೊಂಡಿರುತ್ತೇವೆ. ಇದೆಲ್ಲದರ ಮದ್ಯೆದಲ್ಲಿ 1 ರಿಂದ 3 ನೇ ಪ್ರತಿವಾದಿಯರಿಗೆ ಕಾನೂನು ನೋಟೀಸ್ ನ್ನು ಕಳುಹಿಸಿರುವುದಿಲ್ಲ ಪಂಚಾಯತಿಯನ್ನು ಮಾಡಿರುತ್ತೇವೆ. 2017 ರ ನಂತರದಲ್ಲಿ ಮತ್ತೆ ಯಾವುದೇ ಪಂಚಾಯತಿ ನಡೆದಿರುವುದಿಲ್ಲ.

ಪ್ರತಿವಾದಿಯರಿಗೆ ಮೊದಲನೇ ಬಾರಿ ಕಾನೂನು ನೋಟೀಸ್ ನ್ನು 2021 ಹಾಗೂ 2022 ರಲ್ಲಿ ಕಳುಹಿಸಲಾಗಿರುತ್ತದೆ. ಅದನ್ನು ಹೊರತು ಬೇರೆ ಯಾವುದೇ ನೋಟೀಸನ್ನು ಕಳುಹಿಸಿರುವುದಿಲ್ಲ. 2021 ರ ನೋಟೀಸನ್ನು ಪ್ರತಿವಾದಿಯರ ಊರಿನ ವಿಳಾಸಕ್ಕೆ ಕಳುಹಿಸಿರುತ್ತಾರೆ. ಸದರಿ ನೋಟೀಸ್ ಅವರಿಗೆ ಜಾರಿಯಾಗಿರುತ್ತದೆ. ಅದಕ್ಕೆ ಸಂಬಂಧಿಸಿದ ಅಂಚೆ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ಸದರಿ ದಾಖಲೆಗಳನ್ನು ಸಲ್ಲಿಸದೇ ಇದ್ದರೂ ಸಹ ಸಲ್ಲಿಸಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2022 ರ ನೋಟೀಸ್ ಸಹ ಜಾರಿಯಾಗಿರುತ್ತದೆ. ಸದರಿ ನೋಟೀಸ್ ಗಳ ರಶೀದಿಯನ್ನು ಪ್ರತಿವಾದಿಯರು ಊರಿನಲ್ಲಿ ವಾಸಿಸುತ್ತಿಲ್ಲ ಎಂಬ ವಿಷಯ ಷರಾ ಬರೆದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2021 ರ ಕಾನೂನು ನೋಟಿಸ್ ನ್ನು ಕಳುಹಿಸುವ ಸಮಯಕ್ಕೆ ದಾವಾ ಸ್ವತ್ತು 4 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರದ ಮೂಲಕ ಖಾತಾ ಬದಲಾವಣೆ ಆಗಿತ್ತು ಎಂದರೆ ಸರಿ. ನಮಗೆ ಮೋಸ ಮಾಡಿ ಆ ರೀತಿ ದಾನ ಪತ್ರ ಮಾಡಲಾಗಿರುತ್ತದೆಂದು ಸದರಿ ನೋಟೀಸ್ ನಲ್ಲಿ ತಿಳಿಸಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**